

# ಗುರುಡಂಗ್ಮಾರ್

## ಕಣಿವೆಯ ಮಡಿಲಲ್ಲಿ ತಿಳಿನೀರಿನೊಡಲು

**ದೊಡ್ಡ ಕಣಿವೆಯ ಮಡಿಲಲ್ಲಿ ಚಾಚಿಕೊಂಡಿರುವ ಈ ವಿಶಾಲ ಸರೋವರ, ಹಿಮ ಬೆಟ್ಟಗಳನ್ನು, ಬೆಳ್ಮುಗಿಲುಗಳ ಬಿಂಬವನ್ನು ತನ್ನ ತಿಳಿನೀರಿನಲ್ಲಿ ಜೋಪಾನವಾಗಿ ಕಾದಿಟ್ಟುಕೊಂಡಂತೆ ಕಾಣುತ್ತದೆ. ಈ ದೃಶ್ಯ, ನೋಡುಗರನ್ನು ಭಾವಪರವಶರನ್ನಾಗಿಸುತ್ತದೆ.**

■ ಡಾ. ಪ್ರೇಮಲತ ಬಿ.

ಸಾಮಾನ್ಯವಾಗಿ ನೀರು ಮತ್ತು ಹಿಮವಿರುವ ಜಾಗಗಳ ಸುತ್ತಲೂ ಮಣ್ಣಿರುವ ಭೂಮಿಯಿದ್ದರೆ ಅಲ್ಲಿ ಒಂದಿಷ್ಟು ಮರ –ಗಿಡಗಳನ್ನು, ಹಸುರು ಕಣಿವೆಗಳನ್ನು, ಝುರಿ–ತೊರೆಗಳನ್ನು ಕಾಣುತ್ತೇವೆ. ಆದರೆ ವರ್ಷವಿಡೀ ಪ್ರತಿಕೂಲ ವಾತಾವರಣವಿದ್ದರೆ ನೀರಿದ್ದರೂ ಸರೋವರಗಳ ಸುತ್ತ ಒಂದು ಹುಲ್ಲಿನ ಗರಿಕೆಯೂ ಬೆಳೆಯಲಾರದು. ಅಂದರೆ, ಅಪಾರ ನೀರು ಮತ್ತು ನೆಲವಿದ್ದೂ ಮರುಭೂಮಿಗಳು ಸೃಷ್ಟಿಯಾಗಬಲ್ಲವು. ಅಂಥದ್ದೇ ಒಂದು ಸ್ಥಳ ಗುರುಡಂಗ್ಮಾರ್.

ಸ್ಫಟಿಕ ಸದೃಶ ನೀರಿರುವ ಕೊಳವೊಂದು ಆಗಸದ ತುಣುಕೇ ಮುರಿದುಬಿದ್ದಂತೆ ತೆರೆದುಕೊಳ್ಳುವುದು ಸಿಕ್ಕಿಂ ರಾಜ್ಯದ ಉತ್ತರ ಭಾಗದಲ್ಲಿರುವ ಹಿಮಾಲಯದ ಪೂರ್ವ ತಪ್ಪಲಿನಲ್ಲಿ. ಸುತ್ತಲಿನ ಹಿಮಾವೃತ ಬೆಟ್ಟಗಳನ್ನು, ನೀಲಿ ಮುಗಿಲಿನ ಬಿಳಿ ಮೋಡಗಳನ್ನು ತನ್ನೊಡಲಲ್ಲಿ ಪ್ರತಿಫಲಿಸುತ್ತ ಉದ್ದಗಲ ಹರಡಿರುವ ಈ ಸರೋವರವನ್ನು ಸಿಕ್ಕಿಂ ಜನರು ಗುರುಡಂಗ್ಮಾರ್ ಕೊಳ ಎಂಬ ಹೆಸರಿನಿಂದ ಕರೆಯುತ್ತಾರೆ.

ಹಿಮಾಲಯದ ಕಾಂಚನಜುಂಗಾ ಹಿಮಶಿಖರ ಶ್ರೇಣಿಗಳ ಸಾಲಿನಲ್ಲಿ ಬರುವ ಈ ತಿಳಿನೀರಿನ ಕೊಳ ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲಿದೆ. ಸಿಕ್ಕಿಂ ರಾಜ್ಯದ ಉತ್ತರ ಭಾಗದಲ್ಲಿ ಚೀನಾ ಮತ್ತು ಟಿಬೆಟ್ ಗಡಿರೇಖೆಗೆ ಹೊಂದಿಕೊಂಡಂತೆ ಕಾಣಬರುವ ಈ ಸರೋವರ, ಭಾರತದಲ್ಲಿ ಮತ್ತು ಇಡೀ ಜಗತ್ತಿನಲ್ಲಿ ಅತಿ ಎತ್ತರದಲ್ಲಿ ಕಂಡುಬರುವ ಸರೋವರಗಳಲ್ಲಿ ಒಂದಾಗಿದೆ.

ಸ್ಫಟಿಕ ಶುಭ್ರ ನೀರಿರುವ ಈ ಕೊಳವನ್ನು 'ಸಿಕ್ಕಿಂನ ಒಡವೆ' (**Jewel of Sikkim**) ಎಂದು ಬಣ್ಣಿಸುತ್ತಾರೆ. 5425 ಮೀಟರ್ (17,800 ಅಡಿ) ಎತ್ತರದಲ್ಲಿರುವ ಈ ಕೊಳದ ಸೌಂದರ್ಯ ವಿಶೇಷಣವೇ ಅದು. ಮರಳುಗಾಡೇ ಅಲ್ಲದಿದ್ದರೂ ಗರಿಕೆ ಹಸುರೂ ಕಾಣದ ನೆಲದಲ್ಲಿ, ಹಿಮಾವೃತ ಶಿಖರ ಸಾಲುಗಳ ನಡುವೆ ಈ ಕೊಳ, ಸೌಂದರ್ಯವೇ ಹಾಸುಹೊದ್ದ ಯಕ್ಷಿಣಿಯಂತೆ ಮಲಗಿದ್ದು ನೋಡಿದರೆ ಕಣ್ಣಿಗೆ ಹಬ್ಬದಂತಿರುತ್ತದೆ.